ಮಂದಹಾಸ

# ಕಮ್ಲೂ ಆನ್‌ಲೈನ್ ಸರ್ಕಸ್



■ ವೈ.ಕೆ. ಸಂಧ್ಯಾ ಶರ್ಮ
ಕಲೆ: ಈಶ್ವರ ಬಡಿಗೇರ

ಕಮ್ಲೂದು ಅಡಾವುಡಿ ಸ್ವಭಾವ. ಏನಾದರೊಂದು ಎಡವಟ್ಟು ಮಾಡಿಕೊಳ್ಳೋದು ಮಾಮೂಲು. ಹಾಗಂತ ಅವಳ ಪತಿರಾಯ ಶ್ರೀಕಂಠು ಕಂಪ್ಲೇಂಟು. ಆದರೂ ಹೋಂ ಮಿನಿಸ್ಟರನ್ನ ಎದುರು ಹಾಕಿಕೊಳ್ಳೋದು ಕ್ಷೇಮವಲ್ಲ ಅಂತ ಅರಿತುಕೊಂಡೋನು, ಆಗಾಗ ಮೆಲ್ಲಗೆ ಬುದ್ಧಿವಾದ ಹೇಳ್ತಾನೆ ಇರ್ತಾನೆ.

'ಕಮ್ಲೂ, ನೀನು ತುಂಬಾ ಜಾಣೆ ಕಣೆ. ಆದರೂ ಯಾವ ಕೆಲಸ ಮಾಡುವಾಗ್ಲೂ, ಹತ್ತುಸಲ ಯೋಚ್ನೆ ಮಾಡು... ತಲೆ ಸ್ವಲ್ಪ ತಣ್ಣಗೆ ಇಟ್ಕೋ' ಎಂದು ಹೇಳಿದಾಗ ಅವಳು ವಿಧೇಯಳಂತೆ ತಲೆ ಆಡಿಸ್ತಾನೆ ಇರ್ತಾಳೆ, ಆಮೇಲೆ ಏನಾದರೊಂದು ಸಮಸ್ಯೆ ಆದಾಗ, ಗಂಡನ ತಲೆ ತಿನ್ನೋದು ಮಾತ್ರ ತಪ್ತಿರ್ಲಿಲ್ಲ.

ಈ ಸಲ ಆದದ್ದೂ ಹಾಗೆಯೇ...

ಬೆಳಗ್ಗೆ ಕಣ್ಣು ಬಿಟ್ಟಾಗ ದೇವರ ಪಟ ನೋಡಿದ್ದಾಯ್ತು, ಕೈ ಮುಗಿದದ್ದೂ ಆಯ್ತು. ವರ್ಕ್ ಫ್ರಂ ಹೋಂನಲ್ಲಿದ್ದ ಮಗರಾಯನ ಮೊದಲ ಕಮಾಂಡ್ ಬರುವ ಮುನ್ನವೇ ತಾನೇ ವಾಟ್ಸಾಪ್ ತೆಗೆದು, 'ತಿಂಡಿ ಏನ್ಮಾಡಲಿ?' ಎಂದು ಮೆಸೇಜ್ ಕುಟ್ಟಿದಳು.

ಅವನಿಂದ ಬೆಳಬೆಳಗ್ಗೆ ಚಿರೋಟಿ ಎಂದಿದ್ದರೂ ಉತ್ಸಾಹದಲ್ಲಿ 'ಥೈ' ಅಂತ ಸಿದ್ಧವಿದ್ದಳು. ಪಾಪ ಅವನು, ಅವಳ ಕರುಳಬಳ್ಳಿ... ಅಷ್ಟು ಕ್ರೂರವಾಗಿರಲಿಲ್ಲ. ಬಹಳ ಸಿಂಪಲ್ಲಾಗಿ, 'ತೊಂದ್ರೆ ತೊಗೋ ಬೇಡ ಅಮ್ಮ, ಅಕ್ಕಿ ರೊಟ್ಟಿ–ಟೊಮ್ಯಾಟೊ ಗೊಜ್ಜು ಸಾಕು' ಅಂದಿದ್ದ.

ಅಷ್ಟೇ ತಾನೇ ಎಂದು ಜೋಷಿನಿಂದ ಅಡುಗೆ ಮನೆಗೆ ಹಾರಿದ ಕಮ್ಲೂ, ಫ್ರಿಜ್ ತೆಗೆದು ನೋಡ್ತಾಳೆ, ಟೊಮ್ಯಾಟೊ ಎಲ್ಲ ಖಾಲಿ. ಏನ್ಮಾಡೋದು? ತಲೆ ಪರಪರ ಕೆರೆದುಕೊಂಡಳು. ಅವನ ಎರಡನೆಯ ಆಪ್ಷನ್ ಟೈಪಿಸಿದಳು.

'ಆಯ್ತು ಬಿಡಮ್ಮ, ಟಾಪ್ ರಾಮನ್ ನೂಡಲ್ಸ್ ಮಾಡು ಸಾಕು'.

ಕಮ್ಲೂಗೆ ಹೋದ ಜೀವ ಬಂದ ಹಾಗಾಯ್ತು. ಸರ್ರನೆ ಶೆಲ್ಫ್ ತಡಕಾಡಿದರೆ, ಎದೆ ಧಸಕ್ಕೆಂದಿತು. ಛೆ... ಅದೂ ಖಾಲಿ! ಮ್ಯಾಗಿ? – ಉಹೂಂ, ಅವನಿಗದು ಇಷ್ಟವಿಲ್ಲ.

'ಅಯ್ಯೋ ಪೆದ್ದಿ... ನಮ್ಮಂಥವರ ಸಹಾಯಕ್ಕೇ ಅಂತಲೇ ಮೊಬೈಲ್ ಆ್ಯಪ್‌ಗಳಿಲ್ವೇ' ಎಂದುಕೊಂಡವಳು ಗೆಲುವಾಗಿ ನಕ್ಕಳು. ಹದಿನೈದು ನಿಮಿಷಗಳಲ್ಲಿ ಸಪ್ಲೈ ಮಾಡೋ ಆ್ಯಪ್ ತೆಗೆದು, ಟೊಮ್ಯಾಟೊ, ಟಾಪ್ ರಾಮನ್ ನೂಡಲ್ಸ್ ಮತ್ತು ಗರಂ ಮಸಾಲ ಪ್ಯಾಕ್, ಜೊತೆಗಿರಲಿ ಅಂತ ಒಂದು ಲೇಸ್ ಚಿಪ್ಸ್ ಆರ್ಡರ್ ಮಾಡೇಬಿಟ್ಳು.

ಶ್ರೀಕಂಠು ಕಣ್ಣು ಬಿಟ್ಕೊಂಡು ನೋಡುತ್ತಲೇ ಇದ್ದ – ಜಾದೂ ಮಾಡಿದ ಸ್ಟೈಲ್‌ನಲ್ಲಿ ಟಕಟಕ ಮನೆಯ ಮುಂಬಾಗಿಲತ್ತ ಒಮ್ಮೆ, ಇನ್ನೊಮ್ಮೆ ಬಾಲ್ಕನಿಯತ್ತ ಜಿಗಿದು, ಅಲ್ಲಿಂದ ಕೆಳಬಾಗಿ ನೋಡುತ್ತಿದ್ದ ಕಮಲಾ ಮಣಿಯನ್ನು. ಕಾಲಿಂಗ್ ಬೆಲ್ ಕೇಳುತ್ತಿದ್ದಂತೆ ಹೊರಗೆ ಧಾವಿಸಿದ ಕಮ್ಲೂ, ಕೆಲವೇ ಕ್ಷಣಗಳಲ್ಲಿ ಬಾಗಿಲಾಚೆ ಕೂಗಾಡುತ್ತಿದ್ದುದನ್ನು ಕೇಳಿ ಶ್ರೀಕಂಠು ಅಲ್ಲಿಗೆ ಹಾರಿಬಂದಿದ್ದ.

ಕಮ್ಲೂ ಮುಖ ಕಿವುಚಿ ಹೋಗಿತ್ತು. ಡೆಲಿವರಿ ಬಾಯ್ ಮೇಲೆ ರೇಗಾಡುತ್ತಿದ್ದಳು. ಅವನು ತಂದು ಕೊಟ್ಟ ಪೇಪರ್ ಬ್ಯಾಗಿನಿಂದ ಅಂಟು ದ್ರವ ತೊಟ ತೊಟ ಸೋರುತ್ತಿತ್ತು.

'ಮೊಟ್ಟೆ ಒಡೆದು ಹೋಗಿತ್ತು ಮೇಡಂ...'